# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/23/2015 16 ದಿನಾಂಕ: 18 .08.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

ವಾದಿ (ಶ್ರೀ/ಶ್ರೀಮತಿ)

ಎಸ್ ಪಾರ್ವತಮ್ಮ ಗಂಡ ಚನ್ನಬಸವನಗೌಡ
ಅಂಕಸಮುದ್ರ ಗ್ರಾಮ, ಹಬೊಹಳ್ಳಿ ತಾಲೂಕು

ಪ್ರತಿವಾದಿ (ಶ್ರೀ/ಶ್ರೀಮತಿ)

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ

ವ್ಯಾಜ್ಯದ ಜಮೀನಿನ ವಿವರ

| ಗ್ರಾಮ | ಸ.ನಂ. | ವಿಸ್ತೀರ್ಣ ಕ್ರಮವಾಗಿ |
|---|---|---|
| ಅಂಕಸಮುದ್ರ | 1. 118/ಬಿ,<br>2. 172/ಹೆಚ್(ಪೈಕಿ),<br>3. 172/1,<br>4. 174/ಎ/ಎ/2,<br>5. 232/ಇ/ಇ1,<br>6. 250/ಬಿ/2,<br>7. 259/ಬಿ ಮತ್ತು<br>8. 259/ಇ. | 1. 0.89,<br>2. 5.66,<br>3. 6.79,<br>4. 2.83,<br>5. 2.73,<br>6. 3.78,<br>7. 1.82 ಮತ್ತು<br>8. 1.69 ಎಕರೆ |

*****

ಪೀಠಿಕೆ:

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 118/ಬಿ, 172/ಹೆಚ್(ಪೈಕಿ), 172/1, 174/ಎ/ಎ/2, 232/ಇ/ಇ1, 250/ಬಿ/2, 259/ಬಿ, ಮತ್ತು 259/ಇ ವಿಸ್ತೀರ್ಣ ಕ್ರಮವಾಗಿ 0.89, 5.66, 6.79, 2.83, 2.73, 3.78, 1.82 ಮತ್ತು 1.69 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪೋತಿ ವಾರಸತ್ವದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್10/2015-16 ರಲ್ಲಿ ದಾಖಲೆಯಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:16.10.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ಪ್ರಕರಣದ ವಿಚಾರಣೆಗೆ ವಾದಿಗಳ ಪರವಾಗಿ ಎಸ್ ಲಿಂಗನಗೌಡ ವಕೀಲರು ಹಬೊ ಹಳ್ಳಿ ಇವರು ವಕಾಲತ್ತು ನಾಮೆ ಸಲ್ಲಿಸಿದ್ದು ವಾದಿಗಳು ಸತತವಾಗಿ ಗೈರು ಹಾಜರಿದ್ದು ತಾವಾಗಲೀ ತಮ್ಮ ಪರವಕೀಲರಾಗಲೀ ತಮ್ಮ ಲಿಖಿತ ವಾದ ಮಂಡನೆ / ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆ ಕಾರಣ ಪ್ರಕರಣವನ್ನು ಕಡತದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನಿಸುವುದು ಸೂಕ್ತವೆಂದು ಪರಿಗಣಿಸಲಾಯಿತು.

ವಾದಿಗಳು ಮಂಡಿಸಿದ ವಾದ ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ಹಾಲಿ ವ್ಯಾಜ್ಯದ ಜಮೀನುಗಳ ಪೈಕಿ ಸ.ನಂ.118/ಬಿ, 172/ಹೆಚ್ (ಪೈಕಿ), 172/1, ಗಳಲ್ಲಿನ ಪಟ್ಟಾದಾರರ ಹೆಸರು ಶಿವನಗೌಡ್ರ ಚನ್ನಬಸವನಗೌಡ ತಂದೆ ಲಿಂಗನಗೌಡ ಎಂದು ನಮೂದಾಗಿದ್ದು ಮತ್ತು ಸ.ನಂ.174/ಎ/ಎ/2 ರಲ್ಲಿ ಪಟ್ಟಾದಾರರ ಹೆಸರು ಶಿವನಗೌಡ್ರ ಚನ್ನಬಸವನಗೌಡ ಎಂದೂ ಹಾಗೂ ಸ.ನಂ. 232/ಇ/ಇ1, 250/ಬಿ/2, 259/ಬಿ, 259/ಇ ರ ಪಹಣಿ ಪತ್ರಿಕೆಯಲ್ಲಿ ಎಸ್ ಚನ್ನಬಸವನಗೌಡ ತಂದೆ ಎಸ್ ಬಸವನಗೌಡ ಎಂದು ನಮೂದಾಗಿರುವುದು ಕಂಡುಬಂದಿರುತ್ತದೆ.
2. ವಾದಿಗಳು ತಮ್ಮ ಮನವಿಯೊಂದಿಗೆ ಸಲ್ಲಿಸಿದ ವಂಶವೃಕ್ಷ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಶಿವನಗೌಡ್ರ ಚನ್ನಬಸವನಗೌಡ ಇವರು ಪೋತಿಯಾಗಿದ್ದು ಅವರ ಪತ್ನಿಯಾದ ಪಾರ್ವತಮ್ಮ ಇವರು ನೇರ ವಾರಸುದಾರರಾಗಿರುವುದು ಕಂಡುಬಂದಿರುತ್ತದೆ.
3. ವಾದಿಗಳು ತಮ್ಮ ಮನವಿಯೊಂದಿಗೆ ಸಲ್ಲಿಸಿದ ಮರಣ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಮೃತರ ಹೆಸರು ಎಸ್ ಚನ್ನಬಸವನಗೌಡ್ರು ಎಂದೂ ಹಾಗೂ ತಂದೆಯವರ ಹೆಸರು ಬಸವನಗೌಡ ಎಂದು ನಮೂದಾಗಿರುವುದು ಕಂಡುಬಂದಿರುತ್ತದೆ, ಹಾಗೂ ಸದರಿ ಶ್ರೀ ಎಸ್ ಚನ್ನಬಸವನಗೌಡ ಇವರು ದಿನಾಂಕ:08.09.1990 ರಂದು ಮರಣ ಹೊಂದಿರುವುದಾಗಿ ಕಂಡುಬಂದಿರುತ್ತದೆ.

ಮೇಲ್ಕಾಣಿಸಿದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರಸ್ತುತ ವಹಿವಾಟಿನ ಹಕ್ಕುಬದಲಾವಣೆ ಆದೇಶದಲ್ಲಿನ ವ್ಯಾಜ್ಯದ ಜಮೀನುಗಳಲ್ಲಿನ ಮೂಲ ಪಟ್ಟಾದಾರರ ಹೆಸರಿಗೂ ಹಾಗೂ ಮೃತರ ಮರಣ ಪ್ರಮಾಣ ಪತ್ರದಲ್ಲಿನ ಹೆಸರಿಗೂ ವ್ಯತ್ಯಾಸ ಕಂಡುಬಂದಿರುವುದರಿಂದ ಮನವಿದಾರರು ಸೂಕ್ತ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಿ ಪಹಣಿ ಪತ್ರಿಕೆಯಲ್ಲಿನ ದೋಷವನ್ನು ಸರಿಪಡಿಸಿಕೊಂಡು ತದ ನಂತರ ಪೋತಿ ವಾರಸ ಪ್ರಕಾರ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಬಹುದಾಗಿರುವುದರಿಂದ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 118/ಬಿ, 172/ಹೆಚ್(ಪೈಕಿ), 172/1, 174/ಎ/ಎ/2, 232/ಇ/ಇ1, 250/ಬಿ/2, 259/ಬಿ, ಮತ್ತು 259/ಇ ವಿಸ್ತೀರ್ಣ ಕ್ರಮವಾಗಿ 0.89, 5.66, 6.79, 2.83, 2.73, 3.78, 1.82 ಮತ್ತು 1.69 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯಲ್ಲಿನ ದೋಷವನ್ನು ಸೂಕ್ತ ದಾಖಲೆಗಳೊಂದಿಗೆ ನಿಯಮಾನುಸಾರ ಸರಿಪಡಿಸಿಕೊಂಡು ವಾದಿಗಳು ಪೋತಿ ವಾರಸತ್ವ ಪ್ರಕಾರ ಖಾತೆ ಬದಲಾವಣೆಗೆ ಮನವಿ ಸಲ್ಲಿಸಲು ಸೂಚಿಸುತ್ತಾ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 18.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

18/08

[ನಾಗರಾಜ.ಹೆಚ್]
ಉಪ ತಹಸೀಲ್ದಾರರು,
ತಂಬ್ರಹಳ್ಳಿ.

ಉಪ ತಹಸೀಲ್ದಾರರು, ನಾಡ ಕಚೇರಿ, ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

28/8/16